ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿವೆ. ಎಲ್ಲಾ ಕಾಮಗಾರಿಗಳ ವಸ್ತುಸ್ಥಿತಿ ವಿವರಗಳನ್ನು www.indiawater.gov.in ವೆಬ್‌ಸೈಟ್ ಮತ್ತು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಸಾರ್ವಜನಿಕ ಮಾಹಿತಿಗಾಗಿ ಮುಕ್ತವಾಗಿ ಪ್ರತಿಬಿಂಬಿಸಲಾಗಿದೆ.

ಬೆಂಗಳೂರು ನಗರದ ಗ್ರಂಥಾಲಯಗಳಿಗೆ ಪತ್ರಿಕೆಗಳ ಸರಬರಾಜು

2437(3416); ಶ್ರೀ ಚೆಲುವರಾಯಸ್ವಾಮಿ ಎನ್.

ಅ) ಬೆಂಗಳೂರು ನಗರದಲ್ಲಿರುವ ಸಾರ್ವಜನಿಕ ಗ್ರಂಥಾಲಯಗಳ ಸಂಖ್ಯೆ ಎಷ್ಟು; ಈ ಗ್ರಂಥಾಲಯಗಳಿಗೆ ಪ್ರತಿ ದಿನ ಬರುವ ಓದುಗರ ಸಂಖ್ಯೆ ಎಷ್ಟು; ಸ್ವಂತ ಕಟ್ಟಡದಲ್ಲಿ ನಡೆಯುತ್ತಿರುವ ಗ್ರಂಥಾಲಯಗಳೆಷ್ಟು; ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಗ್ರಂಥಾಲಯಗಳೆಷ್ಟು; ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಗ್ರಂಥಾಲಯಗಳೆಷ್ಟು; ಪಾವತಿ ಮಾಡುತ್ತಿರುವ ವಾರ್ಷಿಕ ಬಾಡಿಗೆ ಎಷ್ಟು;

ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಬಾಕಿ ಇರುವ ಗ್ರಂಥಾಲಯ ಉಪಕರ ಎಷ್ಟು; ಈ ಮೊತ್ತ ಎಷ್ಟು ವರ್ಷಗಳಿಂದ ಬಾಕಿ ಇರುತ್ತದೆ;

ಇ) ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಗ್ರಂಥಾಲಯಗಳು ಪತ್ರಿಕಾ ಸರಬರಾಜುದಾರರಿಗೆ ನೀಡಬೇಕಾದ ಬಿಲ್‌ನ ಮೊತ್ತ ಎಷ್ಟು; ಪತ್ರಿಕಾ ಸರಬರಾಜುದಾರರು ಮಾರ್ಚ್ 1 ರಿಂದ ಪತ್ರಿಕೆಗಳ ಸರಬರಾಜ್‌ನ್ನು ನಿಲ್ಲಿಸುವುದಾಗಿ ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆ: ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ)

1)	ಬೆಂಗಳೂರು ನಗರದಲ್ಲಿರುವ ಸಾರ್ವಜನಿಕ ಗ್ರಂಥಾಲಯಗಳ ಸಂಖ್ಯೆ	199
2)	ಪ್ರತಿ ದಿನ ಬರುವ ಓದುಗರ ಸಂಖ್ಯೆ	24980
3)	ಸ್ವಂತ ಕಟ್ಟಡಗಳ ಸಂಖ್ಯೆ	11
4)	ಬಾಡಿಗೆ ಕಟ್ಟಡಗಳ ಸಂಖ್ಯೆ	23
5)	ಪಾವತಿ ಮಾಡುತ್ತಿರುವ ವಾರ್ಷಿಕ ಬಾಡಿಗೆ	54,11,304–00

ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಕಳೆದು ಐದು ವರ್ಷಗಳಿಂದ ಅಂದಾಜು ರೂ. 24,991.52 ಲಕ್ಷಗಳ ಗ್ರಂಥಾಲಯ ಕರ ಬಾಕಿಯಿರುತ್ತದೆ. ವಿವರ ಈ ಕೆಳಕಂಡಂತಿದೆ.

ರೂ.ಲಕ್ಷಗಳಲ್ಲಿ

2010–11	2643.34
2011–12	1243.28
2012–13	3111.56
2013–14	9150.00
2014–15	8843.34
ಒಟ್ಟು	**24991.52**

ಇ) ಪತ್ರಿಕಾ ಸರಬರಾಜುದಾರರಿಗೆ ನೀಡಬೇಕಾದ ಬಿಲ್‌ನ ಮೊತ್ತ ರೂ. 2,63,14,107–00 ಪತ್ರಿಕಾ ಸರಬರಾಜುದಾರರು ಮಾರ್ಚ್ 1 ರಿಂದ ಪತ್ರಿಕೆಗಳ ಸರಬರಾಜು ಸ್ಥಗಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಬಿ.ಬಿ.ಎಂ.ಪಿ.ಯಲ್ಲಿ ಬಾಕಿ ಉಳಿಸಿಕೊಂಡಿರುವ ಗ್ರಂಥಾಲಯ ಕರವನ್ನು ಬಿಡುಗಡೆ ಮಾಡಿಸುವಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಸರ್ಕಾರದ ಕಾರ್ಯದರ್ಶಿಗಳು, ಪೌರಾಡಳಿತ ಮತ್ತು ನಗರಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಗೆ ಅರೆ ಸರ್ಕಾರಿ ಪತ್ರ ದಿ: 19–02–2015, 12–03–2015 ರ ಮುಖಾಂತರ ಪತ್ರ ವ್ಯವಹರಿಸಲಾಗಿದೆ.

ಮಾನ್ಯ ಶಿಕ್ಷಣ ಸಚಿವರ ಟಿಪ್ಪಣಿ/ನಡವಳಿ ಸಂ. ಪ್ರಾ&ಪ್ರೌಸ:31/2015 ದಿನಾಂಕ 5–3–2015 ರಂದು ಮಾನ್ಯ ಮುಖ್ಯಮಂತ್ರಿಗಳಿಗೆ, ಪೂಜ್ಯ ಮಹಾಪೌರರಿಗೆ, ಆಯುಕ್ತರಿಗೆ ಹಾಗೂ ಮಾನ್ಯ ಪೌರಾಡಳಿತ, ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರುಗಳಿಗೆ ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಪೌರಾಡಳಿತ ಮತ್ತು ನಗರಾಭಿವೃದ್ಧಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆಗಳಿಗೆ ಬಾಕಿಯಿರುವ ಗ್ರಂಥಾಲಯ ಕರ ಪಾವತಿಸುವಂತೆ ಪತ್ರ ವ್ಯವಹರಿಸಲಾಗಿರುತ್ತದೆ. ಆದರೂ ಸಹ ಬಿ.ಬಿ.ಎಂ.ಪಿ.ಯಿಂದ ಬಾಕಿಯಿರುವ ಗ್ರಂಥಾಲಯ ಕರ ನಿಯಮಾನುಸಾರ ಇಲಾಖೆಗೆ ಪಾವತಿಸುತ್ತಿಲ್ಲ.

ಸಾರ್ವಜನಿಕರಿಂದ ಸಂಗ್ರಹಿಸಲಾದ ಆಸ್ತಿ ಕರದ ಮೇಲೆ ನಿಗದಿಪಡಿಸಿರುವ ಗ್ರಂಥಾಲಯ ಕರವನ್ನು ಸಂಗ್ರಹಿಸಿದ್ದು, ಅದನ್ನು ಗ್ರಂಥಾಲಯ ಇಲಾಖೆಗೆ ಪಾವತಿಸದೇ ಇರುವುದರಿಂದ ಗ್ರಂಥಾಲಯ ಇಲಾಖೆಯ ಪ್ರಗತಿಗೆ ಹಿನ್ನಡೆ ಆಗುತ್ತಿದ್ದು ಹಾಗೂ ಸಾರ್ವಜನಿಕರಿಗೆ ಸಮರ್ಪಕವಾಗಿ ವಿವಿಧ ಸೇವೆಗಳನ್ನು ನೀಡಲು ತೊಂದರೆ ಯಾಗುತ್ತಿರುವುದರಿಂದ ಸಂಗ್ರಹಿಸಲಾದ ಒಟ್ಟು ಕರವನ್ನು ನಿಗದಿತವಾಗಿ ಇಲಾಖೆಗೆ ಪಾವತಿಸದೇ ಇದ್ದಲ್ಲಿ ಸ್ಥಳೀಯ ಸಂಸ್ಥೆಯ ಆಡಳಿತ ಅಧಿಕಾರಿಗಳನ್ನು ಶಿಸ್ತುಕ್ರಮಕ್ಕೊಳಪಡಿಸುವ ಹಾಗೂ ಕಾನೂನಿನನ್ವಯ ಕ್ರಿಮಿನಲ್ ಪ್ರಕರಣವನ್ನು ಹೂಡುವ ಕುರಿತಂತೆ ಕಾಯ್ದೆಗೆ ತಿದ್ದುಪಡಿ

ತರಲು ಸದರಿ ಸಭೆಯಲ್ಲಿ ನಿರ್ಧರಿಸಲಾಗಿದ್ದು, ಅದರಂತೆ ಇಲಾಖೆ ಸಲ್ಲಿಸಿದ ಪ್ರಸ್ತಾವನೆಯ ಮೇರೆಗೆ ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಸ್ಥಳೀಯ ಸಂಸ್ಥೆಗಳಿಂದ ಬರಬೇಕಾದ ಗ್ರಂಥಾಲಯ ಕರವನ್ನು ನಿಯಮಾನುಸಾರವಾಗಿ 30 ದಿನಗಳೊಳಗೆ ಸಂಬಂಧಪಟ್ಟ ಜಿಲ್ಲಾ ಕೇಂದ್ರ ಗ್ರಂಥಾಲಯಗಳಿಗೆ ಮತ್ತು ನಗರ ಕೇಂದ್ರ ಗ್ರಂಥಾಲಯಗಳಿಗೆ ಪಾವತಿಸಲು ವಿಫಲವಾದಲ್ಲಿ ಅಥವಾ ವಿಳಂಬ ಮಾಡಿದಲ್ಲಿ ಶೇ.10ರಷ್ಟು ಬಡ್ಡಿಯನ್ನು ವಿಧಿಸಲು ಮತ್ತು ಕ್ರಿಮಿನಲ್ ಪ್ರಕರಣವನ್ನು ಕಾನೂನಿನ್ವಯ ದಾಖಲಿಸಲು ಹಾಗೂ ಕನಿಷ್ಠ ಒಂದು ವರ್ಷ ಕಠಿಣ ಸಜೆ ವಿಧಿಸಲು ಕ್ರಮಕೈಗೊಳ್ಳಬಹುದೆಂದು ಪ್ರಸ್ತಾಪಿಸಿದ್ದು, ಅದರನ್ವಯ ಸಾರ್ವಜನಿಕ ಗ್ರಂಥಾಲಯ ಇಲಾಖೆ ಕಾಯ್ದೆ 1965ರ ಪ್ರಕರಣ 30ಕ್ಕೆ ತಿದ್ದುಪಡಿ ತರಲು ಪರಿಶೀಲಿಸಲಾಗುತ್ತಿದೆ.

ಸ್ನಾನ ಗೃಹಗಳ ನಿರ್ಮಾಣ

2438(3417); ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ)

ಅ) ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಬಚ್ಚಲು ಮನೆ ಅಥವಾ ಸ್ನಾನಗೃಹಗಳ ನಿರ್ಮಾಣಕ್ಕೆ ನೆರವು ನೀಡುವ ಯೋಜನೆಯನ್ನು ರೂಪಿಸಲಾಗಿದೆಯೇ; ಈ ಯೋಜನೆಯ ರೂಪುರೇಷೆಗಳೇನು; ಯಾವಗಿನಿಂದ ಈ ಯೋಜನೆಯನ್ನು ಜಾರಿಗೆ ತರಲಾಗುವುದು;

ಆ) ಪ್ರಸಕ್ತ ವರ್ಷದ ಆಯವ್ಯಯದಲ್ಲಿ ಈ ಯೋಜನೆಗೆ ನಿಗದಿಪಡಿಸುವ ಅಂದಾಜು ಮೊತ್ತ ಎಷ್ಟು; ಪ್ರತಿ ಬಚ್ಚಲು ಮನೆಗೆ ನಿಗದಿಪಡಿಸುವ ಸಹಾಯಧನ ಎಷ್ಟು; ಎಷ್ಟು ಬಚ್ಚಲು ಮನೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ?